ದಿನಾಂಕ 06.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಬಿ.ಬಿ.ಎಂ ವಕೀಲರಿಂದಃ-**

ನಾನು **2014** ರಿಂದ **2020** ರವರೆಗೆ ವಿರಾಜಪೇಟೆಯ ಪಟ್ಟಣ ಪಂಚಾಯಿತಿಯಲ್ಲಿ ಕೌನ್ಸಿಲರ್ ಆಗಿ ನಂತರ ಉಪಾಧ್ಯಕ್ಷೆಯಾಗಿದ್ದೆನು. ಪ್ರತಿವಾದಿಗಳು ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣ ವಿರಾಜಪೇಟೆಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ (ಕಿರಿಯ ವಿಭಾಗ) ಇತ್ಯರ್ಥಕ್ಕಾಗಿ ಬಾಕಿ ಇದೆ. ಸದರಿ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿರುವುದಿಲ್ಲ. ನಾನು ಮನೆಯಲ್ಲಿ ವಾಸವಾಗಿರುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ದಿನಾಂಕ **28.05.2015** ರ ನಂತರ ಪ್ರತಿವಾದಿಗಳು ನನ್ನನ್ನು ವಿರಾಜಪೇಟೆಯಲ್ಲಿ ಯಾವಾಗ ಭೇಟಿ ಮಾಡಿರುತ್ತಾರೆ ಎಂದರೆ ನನಗೆ ಈಗ ನೆನಪಿಲ್ಲ.

ಮೇ **2015** ರಲ್ಲಿ ಪೋಲೀಸ್ ಠಾಣೆಯಲ್ಲಿ ನನ್ನ ಮತ್ತು ಪ್ರತಿವಾದಿಗಳ ನಡುವೆ ರಾಜೀ ಮಾತುಕತೆ ಆಗಿದ್ದು, ಸದರಿ ಮಾತುಕತೆಯಲ್ಲಿ ಪ್ರತಿವಾದಿಗಳು ನನಗೆ ದಾವಾಸ್ವತ್ತುಗಳಲ್ಲಿ **1/6** ಭಾಗಾಂಶ ನೀಡುವುದಾಗಿ ಒಪ್ಪಿದ್ದು, ನಾನು ಅದಕ್ಕೆ ಸಮ್ಮತ್ತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಂತರ ಆಗಸ್ಟ್ **2015** ರಲ್ಲಿ ಪ್ರತಿವಾದಿಗಳು ಪುನಃ ನನ್ನನ್ನು ಭೇಟಿ ಮಾಡಿ, ಪೋಲೀಸ್ ಠಾಣೆಯಲ್ಲಿ ಮಾಡಿಕೊಂಡ ರಾಜಿಯ ಪ್ರಕಾರ ನಡೆದುಕೊಳ್ಳುವಂತೆ ನನ್ನ ಬಳಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಪ್ರತಿವಾದಿಗಳು ನನ್ನನ್ನು ನನ್ನ ಮಕ್ಕಳೊಂದಿಗೆ ಮನೆ ಬಿಟ್ಟು ನನ್ನ ತಾಯಿಯ ಮನೆಗೆ ಹೋಗುವಂತೆ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ದಾವಾಸ್ವತ್ತಿನಲ್ಲಿದ್ದ ಅಂಗಡಿಗಳ ಬಾಡಿಗೆಯನ್ನು ನನ್ನ ಅತ್ತೆ ಮತ್ತು ಮಾವ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಬಾಡಿಗೆದಾರರೊಂದಿಗೆ ನನ್ನ ಅತ್ತೆ ಮಾವ ಬಾಡಿಗೆ ಒಪ್ಪಂದ ಪತ್ರಗಳನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.